ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೆ, ಳ-ಖಿ-೧೯೯೯ರಲ್ಲಿ ಚಿಕ್ಕನಾಯಕನಹಳ್ಳಿ ಬಸ್ ಸಲ್ಯಾಣ ದಲ್ಲಿ ೩೦ ಅಂಗಡಿಗಳು ಸುಟ್ಟು ಹೋಗಿರುವ ಅಂಗಡಿ ಮಾಲೀಕರಿಗೆ ಇನ್ನೂ ಪರಿಹಾರ ಕೊಟ್ಟಿಲ್ಲ. ಇವತ್ತಿಗೆ ೧೬ ದಿವಸವಾದರೂ ಇನಕ್ಕೆ ಪರಿಹಾರ ಕೊಟ್ಟಿಲ್ಲ.

ಶ್ರೀ ಜೆ. ಹೆಚ್. ಪಟೇಲ್.—ಇದಕ್ಕೆ ನಾಳೆ ಉತ್ತರ ಕೊಡುತ್ತೇನೆ.

ಶ್ರೀ ಆರ್ ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಇತ್ತೀಚೆಗೆ ಗುಲ್ಬರ್ಗ ಜಿಲ್ಲೆಯ ಚಿಂಚೋಳಿ, ಮಾಂಡ್ಯ ಜಿಲ್ಲೆಯ ಕೆರಗೋಡು, ಹಲ್ಲಗೆರೆ ಮುಂತಾದ ಕಡೆಗಳಲ್ಲಿ ದುರ್ಬಲ ವರ್ಗದವರ ಮೇಲೆ ನಡೆಸಿದ ದೌರ್ಜನ್ಯಗಳ ಬಗ್ಗೆ ಮಾನ್ಯ ಗೃಹ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಉಪಾಧ್ಯಕ್ಷರು.—ಇದನ್ನು ನಾಳೆ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ಎಸ್. ನಂಜರಾಯಣ ರಾವ್.—ಮಾನ್ಯ ಅಧ್ಯಕ್ಷರೆ, ನಾವು ಸಹ ಒಂದು ಗಮನ ಸೆಳೆಯುವ ಸೂಚನೆ ಕೊಟ್ಟಿದ್ದೇವೆ. ಇದನ್ನು ಇವೊತ್ತೇ ತೆಗೆದು ಕೊಳ್ಳುವುದಾಗಿ ಅಧ್ಯಕ್ಷರು ಹೇಳಿದ್ದರು.

ಉಪಾಧ್ಯಕ್ಷರು.—ತಮ್ಮದನ್ನು ಸಹ ನಾಳೆ ತೆಗೆದುಕೊಳ್ಳುತ್ತೇನೆ.

ಡಾ॥ ಹೆಚ್. ಎಲ್. ತಿಮ್ಮೇಗೌಡ.—ನಾಳೆ ತೆಗೆದುಕೊಳ್ಳುವುದಾದರೆ ಏಡ್ಸ್ ವೈರಸ್ ಬಗ್ಗೆ ಸಂಬಂಧಪಟ್ಟ ಎಲ್ಲಾ ವಿವರಗಳನ್ನು ನಮಗೆ ಒದಗಿಸಿಕೊಡಬೇಕು.

ಶ್ರೀ ಜೆ. ಎಸ್. ದೇಶಮುಖ್.—ಆಗಬಹುದು. ನಾಳೆ ತಮ್ಮ ಗಮನ ಸೆಳೆಯುವ ಸೂಚನೆಗೆ ಉತ್ತರ ಕೊಡುತ್ತೇನೆ. It will be taken up tomorrow.

ಉಪಾಧ್ಯಕ್ಷರು.—ಈಗ ನಿಯಮ ೩೩೪ರ ಮೇರೆಗೆ ಶ್ರೀ ಚಿಕ್ಕಬೋರಯ್ಯನವರು ವಿಷಯ ಪ್ರಸ್ತಾಪ ಮಾಡಬಹುದು.

ನಿಯಮ 334ರ ಮೇರೆಗೆ

(1) ವಿದ್ಯುತ್ ಕಡಿತವನ್ನು ಸಡಿಲಗೊಳಿಸಿ ಕಡ್ಡಾಯ ಠೇವಣಿಯನ್ನು ಕೈಬಿಡಲು ಮನವಿ

(ಶ್ರೀ ಪಿ. ಎಂ. ಚಿಕ್ಕಬೋರಯ್ಯನವರು:—ಗೈರು ಹಾಜರು)

ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ).—ಮಾನ್ಯ ಅಧ್ಯಕ್ಷರೆ, ಕೆ. ಇ. ಬಿ. ಎಂದರೆ ಕೇಳಿದವರೇ ಇಲ್ಲದ ಭೀಕರ ವ್ಯವಸ್ಥೆ ಎಂದು ಜನ ಆಡಿಕೊಳ್ಳುತ್ತಿದ್ದಾರೆ. ರಾಜ್ಯದಲ್ಲಿ ಮಳೆ ಇಲ್ಲದಿದ್ದರೂ ಪವರ್‌ಕಟ್, ಮಳೆ ಬಂದರೂ ಪವರ್‌ಕಟ್, ಅಣೆಕಟ್ಟು ತುಂಬಿದರೂ, ತುಂಬದೇ ಇದ್ದರೂ ಪರಿಸ್ಥಿತಿ ಒಂದೇ ವಿದ್ಯುತ್ ಉತ್ಪಾದನೆ ಒಂದು ಕಣ್ಣು ಕಟ್ಟಿನ ಕೆಲಸವೆಂಬಂತಾಗಿದೆ. ಸತತ ಆರು ತಾಸುಗಳ ವಿದ್ಯುತ್ ನಿಲುಗಡೆ ಬದಲು ಎರಡು ಹಂತಗಳಲ್ಲಿ ಮೂರು ಮೂರು ತಾಸು ಕಡಿತ ಮಾಡಿ ಎಂದು ಹಿಂದೆ ಪ್ರಸ್ತಾಪಿಸಿದಾಗ, ಸರಕಾರ ಒಪ್ಪಿತ್ತು. ಆ ರೀತಿ ಮಾಡಲಾಗಿತ್ತು. ಆದರೆ ಈ ವರ್ಷ ಪುನಃ ಆರು ತಾಸು ಸೂತ್ರ ಜಾರಿ, ಇದರಿಂದ ರೈತರು ಚಿಕ್ಕ ಉದ್ದಿಮೆದಾರರು. ಬಳಕೆದಾರರು, ಎಲ್ಲರಿಗೂ ತೊಂದರೆ, ಆದ್ದರಿಂದ ಎರಡು ಹಂತಗಳಲ್ಲಿ ಮೂರು ಮೂರು ತಾಸು ನಿಲುಗಡೆ ಸೂತ್ರ ಕೂಡಲೇ ಜಾರಿಗೆ ತರಬೇಕು.

ವಿದ್ಯುತ್ ಸೋರಿಕೆ ತಡೆಗಟ್ಟಿ, ಅಕ್ರಮ ಅಪವ್ಯಯ ನಿಲ್ಲಿಸಿ, ಬಾಕಿ ನಿಂತಿರುವ ಕೋಟಿಗಟ್ಟಲೆ ಹಣ ವಸೂಲಿ ಮಾಡಿ ಆರ್ಥಿಕ ಸ್ಥಿತಿ ಸುಧಾರಿಸಿಕೊಳ್ಳುವ ಬದಲು ಎಲ್ಲ ರೀತಿಯ ಬಳಕೆದಾರರಿಂದ ಠೇವಣಿಯನ್ನು ಕಡ್ಡಾಯವಾಗಿ ಸಂಗ್ರಹಿಸುವ ವಿಧಾನ ಕಷ್ಟದಲ್ಲಿರುವವರ ಕತ್ತು ಹಿಸುಕುವಂತಾಗಿದೆ. ನ್ಯಾಯ ಬದ್ಧವಾಗಿ, ಯೋಗ್ಯದರದಲ್ಲಿ, ಸಕಾಲದಲ್ಲಿ ಸಾಕಷ್ಟು ವಿದ್ಯುತ್ ಪೂರೈಕೆ ಮಾಡಬೇಕಾದ ಮಂಡಳಿ, ಯಾವ ನ್ಯಾಯವೂ ಇಲ್ಲದೆ ತನ್ನದೇ ಆದ ದರದಲ್ಲಿ ತನಗೆ ತೋಚಿದಾಗ ಮಾತ್ರ ವಿದ್ಯುತ್ ನೀಡಿ, ನಿಲುಗಡೆಗೂ ರಿಯಾಯಿತಿ ಇಲ್ಲದೆ ಪೂರ್ಣ ಶುಲ್ಕ ವಸೂಲಿ ಮಾಡುವುದಲ್ಲದೆ ಈ ಅವ್ಯವಸ್ಥೆಗೂ ಮುನ್ನಡೆದ ಠೇವಣಿ ಕೇಳುವುದು ಯಾವ ನ್ಯಾಯ? ಗ್ರಾಹಕರ ಠೇವಣಿಗೆ ಶೇಕಡಾ ೧೦ ಬಡ್ಡಿ ನೀಡಬೇಕೆಂದಿದ್ದರೂ, ಒಂದು ಚಿಕ್ಕಾಸನ್ನಾದರೂ ಕೊಟ್ಟಿದ್ದಿದೆಯೇ? ಮಂತ್ರಿಗಳು ಬದಲಾದರೂ ವ್ಯವಸ್ಥೆ ಬದಲಾಗುತ್ತಿಲ್ಲ. ಅವಸ್ಥೆ ದುರವಸ್ಥೆಯಾಗುತ್ತಿದೆ. ವಿದ್ಯುತ್ ವಿಧಿಯು ತೊತ್ತಾಗುತ್ತಿದೆ.

ಕೇಳುವವರೇ ಇಲ್ಲದ ಭೀಭತ್ಸ ವ್ಯವಸ್ಥೆಯಾಗುತ್ತಿದೆ. ಎಲ್ಲವನ್ನೂ ಸರಿಪಡಿಸಿ, ಬಾಕಿ ವಸೂಲಿ ಮಾಡಿ, ಕಡ್ಡಾಯ ಠೇವಣಿ ಕೈಬಿಡಿ, ಪಡೆದ ಠೇವಣಿಗೆ ನೀಡಿದ ವಾಗ್ದಾನದಂತೆ ಬಡ್ಡಿ ನೀಡಿ, ಕೆ. ಇ. ಬಿ. ಯನ್ನು ಕೇಳುವವರ ಇಷ್ಟಾರ್ಥ ಪೂರೈಸುವ ಬಳಿಕಿನ ವ್ಯವಸ್ಥೆಯನ್ನಾಗಿ ಮಾರ್ಪಡಿಸಿ ಎಂದು ಒತ್ತಾಯಿಸುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಸಚಿವರು).—ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿನ ಆಂತರಿಕ ಉತ್ಪಾದನೆ, ನೆರೆ ರಾಜ್ಯದ ನೆರವು, ಕೇಂದ್ರ ಸರ್ಕಾರದ ಯೋಜನೆಗಳಿಂದ ದೊರೆಯುವ ರಾಜ್ಯದ ಪಾಲು ಇವುಗಳೆಲ್ಲ ಒಟ್ಟು ಗೂಡಿಸಿದ್ದರೂ ಅದು ಅನಿರ್ಬಂದಿತ ವಿದ್ಯುತ್ ಬೇಡಿಕೆಯ ಪ್ರಮಾಣಕ್ಕೆ ಕಡಿಮೆಯಿದೆ. ವರ್ಷಾ ವರ್ಷ ೫ ಲಕ್ಷಕ್ಕೂ ಅಧಿಕವಾಗಿ ಹೊಸ ಗ್ರಾಹಕರ ಸೇರ್ಪಡೆಯಾಗುತ್ತಿದೆ. ಮಳೆ ಸರಿಯಾಗಿ ಆಗುತ್ತಿಲ್ಲ. ರಾಜ್ಯ ಮುಖ್ಯವಾಗಿ ಜಲ ವಿದ್ಯುದುತ್ಪಾದನೆಯ ಅವಲಂಬಿಸಿದೆ. ಹೀಗಾಗಿ ಸತತ ವಿದ್ಯುತ್ತಿರುವ ಬೇಡಿಕೆಯಿಂದಾಗಿ ಕೊರತೆ ತುಂಬಲು ಬಳಕೆ ಮೇಲಿನ ಕಡಿತ ಅತ್ಯಾವಶ್ಯಕ ಹಾಗೂ ಅನಿವಾರ್ಯ.

ವಿದ್ಯುತ್ತಿನ ಬೇಡಿಕೆ ಲಭ್ಯಕ್ಕಿಂತ ಅಧಿಕವಾಗಿ ಬಹುತೇಕ ಸ್ಟೇಷನ್ನುಗಳು, ಲೈನುಗಳು ಓವರ್ ಲೋಡ್ ಆಗಿ ವೋಲ್ಟೇಜಿನಲ್ಲಿ ಕುಸಿತ, ಕೈನು ಟ್ರಿಪ್ ಆಗುವುದು ಸಂಭವಿಸುತ್ತದೆ. ವಿದ್ಯುತ್ ಬೇಡಿಕೆಯನ್ನು ಲಭ್ಯದ ಪ್ರಮಾಣದೊಳಗೆ ಬರುವಂತೆ ಮಾಡಲು ವೋಲ್ಟೇಜಿನ ಸ್ಥಿತಿ ಸುಧಾರಿಸಲು ಲೋಡ್ ಷೆಡ್ಡಿಂಗ್ ಅನಿವಾರ್ಯ, ಹಾಗೂ ಅಗತ್ಯ. ವಿದ್ಯುತ್ ಬಳಕೆ ಮೇಲೆ ವಾರ್ತ್ತು ಡಿಮ್ಮಾಂಡಿನ ಮೇಲೆ ಕಡಿತ ಇಳಿಸಿದುದರಿಂದ ಈ ಅಧಿಕ ಬೇಡಿಕೆ ಸ್ಥಿತಿ ಉಂಟಾಯಿತು. ಇದರಿಂದಾಗಿ ರಾಜ್ಯದಲ್ಲಿ ೭ ಘಂಟೆಗಳ ಕಾಲ ಒಂದೇ ಹಂತದ ನಿಯಮಿತ ವಿದ್ಯುತ್ ನಿಲುಗಡೆ ಜಾರಿಗೆ ತರಲಾಯಿತು, ಇದರಿಂದಾಗಿ ಗ್ರಾಮೀಣ ಪ್ರದೇಶದ ಜನರಿಗೆ ಹಾಗೂ ನೀರಾವರಿ ಪಂಪುಸೆಟ್ಟು ಬಳಕೆದಾರರಿಗೆ ಹಗಲಿನಲ್ಲಿ ಸತತವಾಗಿ ೬ ಘಂಟೆಗಳ ಕಾಲ ವಿದ್ಯುತ್ ಲಭ್ಯವಿರುತ್ತದೆ. ಮತ್ತು ಕೆಲಸ ಕಾರ್ಯಗಳು ನಡೆಯಲು ಸರಿಯಾಗಿದೆ. ಅಲ್ಲದೆ ಈಗಿನ ವ್ಯವಸ್ಥೆಯಿಂದ ವಿದ್ಯುತ್ ಬೇಡಿಕೆ ಲಭ್ಯವಿರುವ ಪ್ರಮಾಣಕ್ಕೆ ಹೊಂದಿಸಲು ಹಾಗೂ ವೋಲ್ಟೇಜನ್ನು ಸುಧಾರಿಸಲು ಅನುಕೂಲವಾಗಿದ್ದು ಇದು ಸಮಂಜಸವಾಗಿದೆ.

ಮಂಡಳಿ ಗ್ರಾಹಕರಿಂದ ಭದ್ರತಾ ಠೇವಣಿ ಪಡೆಯುತ್ತದೆ. ಇದು ಗ್ರಾಹಕರು ಬಳಸುವ ವಿದ್ಯುತ್ ಪ್ರಮಾಣಕ್ಕನುಗುಣವಾಗಿ ಪಡೆಯುವ ಮುಂಗಡ ಪಾವತಿಯಾಗಿದೆ. ಇದು ವಿದ್ಯುತ್ ದರ ಪರಿಷ್ಕರಿಸಿದಂತೆಲ್ಲಾ ಹೆಚ್ಚುತ್ತದೆ. ಹಾಲಿ ಇರುವ ಗ್ರಾಹಕರಿಂದ ಹೆಚ್ಚಳ ಮಾತ್ರ ಪಡೆಯಲಾಗುತ್ತದೆ. ಸಾಧಾರಣವಾಗಿ ಗ್ರಾಹಕರ ಮೇಲೆ ೨೪ ಯಿಂದ ೩ ತಿಂಗಳ ಹಣ ಬಾಕಿ ಬೀಳುತ್ತದೆ. ಇದರಿಂದ ೩ ತಿಂಗಳ ಕನಿಷ್ಟ ಹಣ ಠೇವಣಿಯಾಗಿರುವುದು ಅಗತ್ಯ. ವಿದ್ಯುತ್ ಬಳಕೆ ಮಾಡುವಾಗ ಅತಿ ಹೆಚ್ಚು ವಿದ್ಯುತ್ ಬಳಸಿದ ತಿಂಗಳ ಬಿಲ್ಲಿನ ಹಣ ಗಮನಿಸಿ ಹಾಲಿ ಇರುವ ಠೇವಣಿ ಅಥವಾ ಈ ಅಧಿಕ ಬಳಕೆ ಬಾಬ್ತು ಹಣದ ಆಧಾರದ ಮೇಲೆ ಅವೆರಡರ ವ್ಯತ್ಯಾಸದಷ್ಟು ಹಣವನ್ನು ಮಾತ್ರ ಹೆಚ್ಚಳವಾಗಿ ಪಡೆಯಲಾಗುತ್ತದೆ. ಇದು ಹೊರೆ ಎಂದು ಭಾವಿಸಬಾರದು. ಬಳಕೆದಾರನಿಗೆ ಹೊರೆಯಾಗುವಂತೆ ಠೇವಣಿಯನ್ನು ಹಾಕಬಾರದು ಎಂಬುದು ಸರ್ಕಾರದ ಉದ್ದೇಶ.

೧೦೦ ರೂ. ಗಳಿಗಿಂತ ಅಧಿಕವಿರುವ ಠೇವಣಿಗಳಿಗೆ ೧೮ರಷ್ಟು ಬಡ್ಡಿ ನೀಡಿ ಅದನ್ನು ಗ್ರಾಹಕರ ಬಳಕೆ ಬಾಬ್ತು ಬಿಲ್ಲಿನಲ್ಲಿ ಹೊಂದಾಣಿಕೆ ಮಾಡಲಾಗುತ್ತದೆ. ಈ ಬಡ್ಡಿ ಹಣದ ಲೆಕ್ಕಾಚಾರ ಹಾಗೂ ಹೊಂದಾಣಿಕೆ ಬಗ್ಗೆ ವಿವರವಾದ ಸೂಚನೆ ನೀಡಿದ್ದು ಈ ಕಾರ್ಯ ಪ್ರಗತಿಯಲ್ಲಿದೆ. ಈ ಕಾರ್ಯ ಈಗ ಪ್ರಾರಂಭವಾಗಿರುವುದರಿಂದ ಪ್ರಾಥಮಿಕ ಹಂತದಲ್ಲಿ ಸ್ವಲ್ಪ ನಿಧಾನವಾಗುವುದು ಸಹಜ.

(2) ಮಂಗನಕಾಯಿಲೆ ತಗಲಿದವರಿಗೆ ಪರಿಹಾರ ಮತ್ತು ಅದು ಮುಂದೆ ಪಸರಿಸದಂತೆ ತಡೆ ಕ್ರಮ.

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ, ಶಿವಮೊಗ್ಗ ಜಿಲ್ಲೆಯ ಸೊಸನಗರ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ, ಭಟ್ಕಳಗಳಲ್ಲಿ ಹಿಂದೆ ಇದ್ದ ಮಂಗನ ಕಾಯಿಲೆ ಕುಂದಾಪುರ ತಾಲ್ಲೂಕಿಗೂ ಪಸರಿಸಿ, ಅನೇಕರಿಗೆ ರೋಗ ತಗುಲಿದೆ ಒಂದರಡೂ ಮರಣ ಕೂಡ ಸಂಭವಿಸಿದೆ. ಪ್ರತಿಬಂಧಕ ಚಿಕಿತ್ಸಕ ಕ್ರಮಗಳು ನಡೆದಿದ್ದರೂ ಜನ ಭಯಭೀತರಾಗಿದ್ದಾರೆ. ಮಂಗನ ಕಾಯಿಲೆ ವ್ಯಾಪಕವಾಗಿ ಹರಡದಂತೆ ಸರ್ಕಾರ ಸಶಕ್ತ ಕ್ರಮ ಕೈಗೊಳ್ಳಬೇಕು. ಸೊಪ್ಪು, ತರಗೆಲೆ, ಕಟ್ಟಿಗೆ ತರಲು ಕಾಡಿಗೆ ಹೋಗುತ್ತಿದ್ದ ಸಹಸ್ರಾರು ರೈತರು, ಕೃಷಿ ಕಾರ್ಮಿಕರಿಗೆ ಈ ಕಾಯಿಲೆಯ ಭಯದಿಂದಾಗಿ ಕಾಡಿಗೆ ಹೋಗದಂತಾಗಿ, ಹೊಟ್ಟೆಯ ಪಾಡಿಗೆ ಗತಿ ಇಲ್ಲದೆ ನಿರುದ್ಯೋಗಿಗಳಾಗಿದ್ದಾರೆ. ಮುಖ್ಯವಾಗಿ ಬೈಂದೂರು ಕ್ಷೇತ್ರದಲ್ಲಿ ಈ ಸಮಸ್ಯೆ ಇದೆ. ಆದಕ್ಕಾಗಿ